ವಿಶೇಷ ಧನ ಸಹಾಯ

1004 (1120) ಶ್ರೀ ಕುಲಕರ್ಣಿ ಶ್ರೀಕಾಂತ ಸುಬ್ಬರಾವ್ (ಜಮಖಂಡಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಿಲ್ಲಾ ಪಂಚಾಯತ್‌ದಿಂದ ಲೋಕೋಪಯೋಗಿ ಇಲಾಖೆಗೆ ಮೇಲ್ದರ್ಜೆಗೇರಿಸಲ್ಪಟ್ಟ ರಸ್ತೆಗಳು ಜಮಖಂಡಿ ಕ್ಷೇತ್ರದಲ್ಲಿ ಎಷ್ಟು?

ಅ) ಈ ರಸ್ತೆಗಳು ಭಾರಿ ಮಳೆಯಿಂದ ಸಂಪೂರ್ಣ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಅದಕ್ಕಾಗಿ ಒದಗಿಸಿರುವ ಹಣವೆಷ್ಟು?

ಇ) ಜಮಖಂಡಿ ಕಡಕೋಳ ರಸ್ತೆಯು ಸಂಪೂರ್ಣ ಹಾಳಾಗಿದ್ದು ಅದಕ್ಕಾಗಿ ವಿಶೇಷ ಧನ ಸಹಾಯ ಒದಗಿಸಲಾಗುವುದೇ?

ಶ್ರೀ ಸಿ. ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಜಿಲ್ಲಾ ಪಂಚಾಯತ್‌ದಿಂದ ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಗೆ ಜಮಖಂಡಿ ಮತಕ್ಷೇತ್ರದಲ್ಲಿ ಮೇಲ್ದರ್ಜೆಗೇರಿಸಲ್ಪಟ್ಟ ರಸ್ತೆಯ ಉದ್ದ ಒಟ್ಟು 123.65 ಕಿಮೀಗಳಷ್ಟು ಇರುತ್ತದೆ.

ಆ) ಈ ರಸ್ತೆಗಳನ್ನು ನಿರ್ವಹಣೆಗಾಗಿ 3054 ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಸರ್ಕಾರದಿಂದ ಬಿಡುಗಡೆಯಾದ ಅನುದಾನದಲ್ಲಿ ವಿಭಾಗದ ವ್ಯಾಪ್ತಿಯಲ್ಲಿ ಪ್ರತಿ ಕಿಮೀಗೆ 38000/– ರೂ. ಗಳೆಂದು ನಿಗದಿ ಪಡಿಸಿ, ಈ ರಸ್ತೆಗಳ ನಿರ್ವಹಣೆಗಾಗಿ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆ.

ಇ) ಜಮಖಂಡಿ ತಾಲ್ಲೂಕಿನ ಜಮಖಂಡಿ ಕಡಕೋಳ ರಸ್ತೆಯು ಒಟ್ಟು 8.00 ಕಿಮೀ ಗಳಷ್ಟು ಉದ್ದವಿದ್ದು, ಸದರಿ ರಸ್ತೆಯು ಅಚ್ಚುಕಟ್ಟು ಪ್ರದೇಶದಲ್ಲಿ ಬರುತ್ತಿದ್ದು, ಕಪ್ಪು ಮಣ್ಣಿನಲ್ಲಿ ಹಾದು ಹೋಗುತ್ತದೆ. ಸದರಿ ರಸ್ತೆಯ ಮೇಲೆ ಭಾರೀ ತೂಕ ಹೊತ್ತ ಕಬ್ಬು ಹೇರಿದ ವಾಹನಗಳು ಓಡಾಡುತ್ತಿದ್ದು, ರಸ್ತೆಯು ಹಾಳಾಗಿದೆ. ಸದರಿ ರಸ್ತೆಯನ್ನು ಅಭಿವೃದ್ಧಿ ಪಡಿಸಲು ಕೇಂದ್ರ ರಸ್ತೆ ನಿಧಿ ಯೋಜನೆಯಡಿಯಲ್ಲಿ ಕೈಗೊಳ್ಳುವ ಬಗ್ಗೆ ಪರಿಶೀಲಿಸಲಾಗುವುದು.